ಬಂದಿದೆಯೇ?

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸರಿಯಾದ ಸಮಯಕ್ಕೆ ಸಾಮಗ್ರಿಗಳನ್ನು ನೀಡದಿದ್ದುದರಿಂದ ಬಹುತೇಕ ಪಂಪುಸೆಟ್ಟು ಕೆಲಸಗಳು ಮತ್ತು ಜಲಕಾರ್ಯಾಗಾರಗಳು ನೆನೆಗುದಿಗೆ ಬಿದ್ದಿರುವುದು ನಿಜವೇ?

ಇ) ಚನ್ನಪಟ್ಟಣ ಉಪ ವಿಭಾಗದ ಸದರಿ ಅಗತ್ಯ ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಈ) ಹಾಗಿದ್ದಲ್ಲಿ ಅದನ್ನು ಯಾವಾಗ ಸರಬರಾಜು ಮಾಡಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಆ) ಚನ್ನಪಟ್ಟಣ ತಾಲ್ಲೂಕಿನಲ್ಲಿ ನೀರಾವರಿ ಪಂಪ್‌ಸೆಟ್ಟು ವಿದ್ಯುದ್ದೀಕರಣ ಗುರಿ ನಿಗದಿಯನ್ನು ಆದರಿಸಿ, ಅಗತ್ಯ ಬಿದ್ದಂತೆ ಚನ್ನಪಟ್ಟಣ ಉಪ ವಿಭಾಗಕ್ಕೆ ಸಾಮಗ್ರಿಗಳನ್ನು ಕಳಿಸಿಕೊಡಲಾಗುವುದು.

ಆ) ಪ್ರಾರಂಭದ ತಿಂಗಳುಗಳ ಅವಧಿಯಲ್ಲಿ ಮಾರ್ಗ ಸಾಮಗ್ರಿಗಳ ಸರಬರಾಜಿನಲ್ಲಿ ಸ್ವಲ್ಪ ಮಟ್ಟಿನ ಕೊರತೆಯುಂಟಾಗಿತ್ತು. ಆದರೆ 1992ರ ಆಗಸ್ಟ್ ತಿಂಗಳಿನಿಂದ ಅಗತ್ಯಕ್ಕೆ ಅನುಗುಣವಾಗಿ ಚನ್ನಪಟ್ಟಣ ಉಪವಿಭಾಗಕ್ಕೆ ಮಾರ್ಗ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಇ) ಮತ್ತು ಈ)

ನೀರಾವರಿ ಪಂಪ್‌ಸೆಟ್ಟುಗಳ ವಿದ್ಯುದ್ದೀಕರಣದ ನಿಗದಿತ ಗುರಿ ಸಾಧನೆಗೆ ಮತ್ತು ಜಲ ಕಾರ್ಯಗಾರಗಳ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಸಂಬಂಧಿಸಿದ ಕೆಲಸಗಳ ಪೂರೈಕೆಗೆ ಅನುಕೂಲವಾಗುವಂತೆ ಅಗತ್ಯವಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಮಂಡಳಿಯು ಅಗತ್ಯ ಕ್ರಮ ಕೈಗೊಂಡಿದೆ.

Subject : Promotions to Executive Engineers post in Irrigation Department.

Q : 1342

Sri P. C. Siddanagowdar (Kalghatagi) : Will the Deputy Chief Minister be pleased to state.

a) The number of Executive Engineers working in the Irrigation Department;

b) The number of vacancies of Executive Engineers there in the Irrigation Department;

c) Whether it is a fact that promotions to the posts of Executive Engineers are not given in the irrigation Department.
d) If so, the reasons for the same;
e) The action proposed to be taken by the Government to give promotions to the post of Executive Engineers in Irrigation Department?

Sri S. M. Krishna (Deputy Chief Minister) :

a) 170
b) 20
c) Yes
d) This question does not arise since promotion to the cadre of Executive Engineers are being done in Public Works Department based on common seniority.
e) Does not arise in view of above reply.

ವಿಷಯ : ತುಮಕೂರು ಜಿಲ್ಲೆಯಲ್ಲಿ ರಸ್ತೆಗೆ ಡಾಂಬರ್ ಹಾಕದಿರುವುದು.

Q : 1714

ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿ ಸರಿಯಾಗಿ ರಸ್ತೆಗಳಿಗೆ ಡಾಂಬರ್ ಹಾಕದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.
ಆ) 1990, 1991 ಹಾಗೂ 1992ರಲ್ಲಿ ಒಟ್ಟು ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ಡಾಂಬರ್ ಹಾಕಿದ್ದಾರೆ; (ತಾಲ್ಲೂಕುವಾರು ಪಟ್ಟಿಯನ್ನು ನೀಡುವುದು)
ಇ) ಸರಿಯಾಗಿ ಡಾಂಬರ್ ಹಾಕದಿದ್ದರೆ ಸಂಬಂಧಪಟ್ಟವರ ಮೇಲೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ ರಸ್ತೆ ಡಾಂಬರೀಕರಣದ ಕಾಮಗಾರಿಗಳ ಪೈಕಿ ಒಂದು ಪ್ರಕರಣದಲ್ಲಿ ಸರಿಯಾಗಿ ಡಾಂಬರಿನ ಕೆಲಸ ಮಾಡಿಲ್ಲದಿರುವುದು ಸರ್ಕಾರದ